ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: [illegible]  ದಿನಾಂಕ : DATE 16/3/2021

# ಮೇಲ್ಮನೆಯಲ್ಲಿ ಮೀಸಲಾತಿ ಜಟಾಪಟಿ

16/3/21

ವಿಧಾನ ಪರಿಷತ್ತು: ಮೀಸಲಾತಿ ವಿಚಾರ ಮೇಲ್ಮನೆಯಲ್ಲಿ ಸೋಮವಾರ ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಜಟಾಪಟಿಗೆ ವೇದಿಕೆಯಾಯಿತು.

ಬಜೆಟ್ ಮೇಲಿನ ಚರ್ಚೆ ವೇಳೆ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, 'ಮೀಸಲಾತಿ ತೆಗೆದುಹಾಕಬೇಕೆಂದು 2015ರಲ್ಲಿ ಪ್ರಸ್ತಾಪಿಸಿದ್ದ ಆರೆಸ್ಸೆಸ್, ಇಂದು ಎಲ್ಲರಿಗೂ ಮೀಸಲಾತಿ ನೀಡಿ ಎನ್ನುತ್ತಿರುವುದರ ಹಿಂದೆ ಷಡ್ಯಂತ್ರ ಅಡಗಿದೆ' ಎಂದು ಆರೋಪಿಸಿದರು. ಇದು ವಿವಾದದ ಕಿಡಿಹೊತ್ತಿಸಿತು.

ಕೆರಳಿದ ಆಡಳಿತ ಪಕ್ಷದ ಸದಸ್ಯ ಎನ್. ರವಿಕುಮಾರ್, 'ಆರೆಸ್ಸೆಸ್ ಯಾವತ್ತೂ ಹೀಗೆ ಹೇಳಿಲ್ಲ. ಸುಳ್ಳು ಆರೋಪ ಮಾಡುತ್ತಿರುವ ಕಾಂಗ್ರೆಸ್, ಸ್ವತಃ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸೋಲಿಸಿತ್ತು. ವಾಸ್ತವವಾಗಿ ಕಾಂಗ್ರೆಸ್ ಮೀಸಲಾತಿ ವಿರೋಧಿಯಾಗಿದೆ' ಎಂದು ತಿರುಗೇಟು ನೀಡಿದರು. ಆಡಳಿತ ಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಸದಸ್ಯೆ ತೇಜಸ್ವಿನಿ ದನಿಗೂಡಿಸಿದರು.

ಆಗ ಪ್ರತಿಪಕ್ಷದ ಸದಸ್ಯರು ಆಡಳಿತ ಪಕ್ಷದ ಮೇಲೆ ಮುಗಿಬಿದ್ದರು. ಹರಿಪ್ರಸಾದ್, '2015ರ ಬಿಹಾರ ಚುನಾವಣೆಯಲ್ಲಿ ಆರೆಸ್ಸೆಸ್‌ನ ಸರಸಂಘ ಸಂಚಾಲಕರು ಮೀಸಲಾತಿ ತೆಗೆದುಹಾಕುವ ಮಾತುಗಳನ್ನಾಡಿದ್ದರು. ಇದು ಸುಳ್ಳು ಎಂದಾದರೆ, ನಾನು ರಾಜಕೀಯ ನಿವೃತ್ತಿ ಘೋಷಿಸುತ್ತೇನೆ' ಎಂದು ತಿರುಗೇಟು ನೀಡಿದರು. ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಮತ್ತಿತರ ಸದಸ್ಯರು, 'ಇತಿಹಾಸ ಗೊತ್ತಿಲ್ಲದೆ, ಏನೇನೋ ಮಾತಾಡಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಮಾತನಾಡಿದ ಹರಿಪ್ರಸಾದ್, 'ಮೀಸಲಾತಿ ಎನ್ನುವುದು ಉದ್ಯೋಗ ವಿನಿಮಯ ಅಥವಾ ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತುವುದು. ಸಮ ಸಮಾಜದ ನಿರ್ಮಾಣದ ಉದ್ದೇಶ ಹೊಂದಿದೆ. ಆದರೆ, ಎಲ್ಲರಿಗೂ ಈಗ ಮೀಸಲಾತಿ ನೀಡಲು ಮುಂದಾಗಿರುವುದು ಸೋಜಿಗ' ಎಂದರು.



## ಪರ್ವಕ್ಕೆ ಅನುದಾನ: ಕೋಲಾಹಲ

ವಿಧಾನ ಪರಿಷತ್ತು: ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರ 'ಪರ್ವ' ನಾಟಕ ರಾಜ್ಯಾದ್ಯಂತ ಪ್ರದರ್ಶನಕ್ಕಾಗಿ ಸರ್ಕಾರ ಬಜೆಟ್‌ನಲ್ಲಿ ಕೋಟಿ ರೂ. ಒದಗಿಸಿರುವುದು ಸದನದಲ್ಲಿ ಕೋಲಾಹಲ ಸೃಷ್ಟಿಸಿತು.

ಸೋಮವಾರ ಬಜೆಟ್ ಮೇಲಿನ ಚರ್ಚೆ ವೇಳೆ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ವಿಷಯ ಪ್ರಸ್ತಾಪಿಸಿ, 'ರಾಮನನ್ನು ಪುರಾಣ ಪುರುಷ ಎಂದು ವಿಶ್ಲೇಷಿಸುವ ಭೈರಪ್ಪ ಅವರ ನಾಟಕ ಪ್ರದರ್ಶನಕ್ಕಾಗಿಯೇ ಸರ್ಕಾರ ಒಂದು ಕೋಟಿ ರೂ. ನೀಡುತ್ತದೆ. ಮತ್ತೊಂದೆಡೆ ಅದೇ ರಾಮನ ಬಗ್ಗೆ ಮಾತನಾಡುವ ಪ್ರೊ.ಕೆ.ಎಸ್. ಭಗವಾನ್ ಅವರ ಮುಖಕ್ಕೆ ಮಸಿ ಬಳಿಯಲಾಗುತ್ತದೆ. ಯಾಕೆ ಈ ವಿರೋಧಾಭಾಸ?' ಎಂದು ತರಾಟೆಗೆ ತೆಗೆದುಕೊಂಡರು. ಇದು ವಾಗ್ವಾದದ ಕಿಡಿ ಹೊತ್ತಿಸಿತು.

ಇದಕ್ಕೆ ದನಿಗೂಡಿಸಿದ ಜೆಡಿಎಸ್‌ನ ಶ್ರೀಕಂಠೇಗೌಡ, 'ರಾಷ್ಟ್ರಕವಿ ಕುವೆಂಪು ಅವರು ಬರೆದ 'ಮಲೆಗಳಲ್ಲಿ ಮದುಮಗಳು' ಕೃತಿಯ ನಾಟಕ ಪ್ರದರ್ಶನಕ್ಕೆ ಯಾವುದೇ ಸರ್ಕಾರ ಹಣ ನೀಡಲಿಲ್ಲ. ಅಷ್ಟೇ ಅಲ್ಲ, ರಾಜ್ಯದಲ್ಲಿ ಎಷ್ಟೋ ಸಾಹಿತಿಗಳಿದ್ದಾರೆ. ಅವರ ಯಾವ ಕೃತಿಗೂ ನೀಡದ ಅನುದಾನ ಭೈರಪ್ಪ ಅವರ ಕೃತಿಗೆ ಯಾಕೆ? ಈ ತಾರತಮ್ಯ ಸರಿಯೇ? ಸಾಹಿತ್ಯದಲ್ಲೂ ರಾಜಕಾರಣ ಎಷ್ಟು ಸರಿ?' ಎಂದು ಕೇಳಿದರು.

ಪ್ರತಿಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, 'ದ್ರೌಪದಿಯನ್ನು ದೇವಿ ಎಂದು ಪೂಜಿಸಲಾಗುತ್ತದೆ. ಹೊತ್ತು ಮೆರವಣಿಗೆ ಮಾಡಲಾಗುತ್ತದೆ. ಆ ದೇವಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವವರು ಬರೆದ 'ಪರ್ವ'ದ ನಾಟಕ ಪ್ರದರ್ಶನಕ್ಕೆ ಹಣ ನೀಡಿರುವುದು ಸರಿಯಲ್ಲ' ಎಂದು ಆರೋಪಿಸಿದರು.

ಕೆರಳಿದ ಆಡಳಿತ ಪಕ್ಷದ ಸದಸ್ಯರು, 'ಹಿಂದಿನ ಸರ್ಕಾರಗಳೂ ಕೊಡಬಹುದಿತ್ತು. ಇದಕ್ಕೆ ಯಾವುದೇ ಅಡತಡೆ ಇರಲಿಲ್ಲ. ಭೈರಪ್ಪ ಅವರು ರಚಿಸಿದ ಕೃತಿ 'ಪರ್ವ' ನಾಟಕ ಪ್ರದರ್ಶನಕ್ಕೆ ಹಣ ಒದಗಿಸಲಾಗಿದೆ. ಇದರಲ್ಲಿ ರಾಜಕೀಯ ಮಾಡುವುದು ಸರಿ ಅಲ್ಲ' ಎಂದು ತಿರುಗೇಟು ನೀಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಬಿ.ಕೆ. ಹರಿಪ್ರಸಾದ್, 'ಹಣ ನೀಡಬೇಡಿ ಎಂದು ನಮ್ಮ ವಾದ ಅಲ್ಲ; ಬೇರೆಯವರ ಮುಖಕ್ಕೆ ಮಸಿ ಬಳಿಯಬೇಡಿ ಎಂಬ ವಿನಂತಿ ಅಷ್ಟೇ' ಎಂದು ಸೂಚ್ಯವಾಗಿ ಹೇಳಿದರು.